## 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***Spl.C.No.29/2021***

PW.3
CW.3

ದಿನಾಂಕಃ 20-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರುಃ | ವೆಂಕಟೇಶ |
| ತಂದೆಯ ಹೆಸರುಃ | ಕೃಷ್ಣಮೂರ್ತಿ |
| ವಯಸ್ಸುಃ | 32 ವರ್ಷ |
| ವೃತ್ತಿಃ | ಚಾಲಕ |
| ವಾಸಸ್ಥಳಃ | ಡಿ.ಎಂ.ಪಾಳ್ಯ |

**ಮುಖ್ಯ ವಿಚಾರಣೆಃ ಸರ್ಕಾರಿ ಅಬಿಯೋಜಕರಿಂದ**

ಚಾಸಾಃ 1 ನನ್ನ ಮಾವ. ಚಾಸಃ 2 ನನ್ನ ಮಾವನ ಮನೆಯಲ್ಲಿ ಬಾಡಿಗೆಗೆ ಇದ್ದವರು. ಚಾಸಾಃ 4 ಗೊತ್ತು. ಚಾಸಾಃ 5 ರಿಂದ 14 ಗೊತ್ತಿಲ್ಲ. ವಿಸಿ ಮೂಲಕ ಹಾಜರಿರುವ ಮೂವರು ಅರೋಪಿಗಳು ಹಾಗೂ ನ್ಯಾಯಾಲಯದ ಮುಂದೆ ಹಾಜರಿರುವ ಇಬ್ಬರು ಅರೋಪಿಗಳನ್ನು ನಾನು ಈ ಹಿಂದೆ ನೋಡಿಲ್ಲ.

2. ಡಿ.ಎಂ ಪಾಳ್ಯದಲ್ಲಿ ನನ್ನ ಮಾವನಿಗೆ 16 ಚಿಕ್ಕ ಚಿಕ್ಕ ಮನೆಗಳು ಇರುತ್ತವೆ ಅವುಗಳನ್ನು ಬಾಡಿಗೆಗೆ ಕೊಡುವ ಉದ್ದೇಶಕ್ಕಾಗಿ ನಿರ್ಮಾಣ ಮಾಡಿರುತ್ತಾರೆ. ಅವುಗಳಲ್ಲಿ ಕೆಲವು ಶೀಟಿನ ಮನೆಗಳು ಇರುತ್ತವೆ. ಯಾವ ಮನೆಗಳಲ್ಲಿ ಯಾರು ಯಾರು ಬಾಡಿಗೆಗೆ ಇದ್ದರು ಎಂದು ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಯಾವ ಮನೆಯನ್ನು ಎಷ್ಟು ಹಣಕ್ಕೆ ಬಾಡಿಗೆಗೆ

ಕೊಟ್ಟಿದ್ದರು ಮತ್ತು ಎಷ್ಟು ಮನೆಗಳು ಖಾಲಿ ಇದ್ದವು ನನಗೆ ಗೊತ್ತಿಲ್ಲ. ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರಿಗೆ ನನ್ನ ಮಾವ ಬಾಡಿಗೆಗೆ ಕೊಟ್ಟಿದ್ದರು. ನನಗೆ ಬಾಡಿಗೆ ವಾಸಿಗಳ ಹೆಸರು ಗೊತ್ತಿಲ್ಲ. ಮೃತ ಅಂಜಲಿ ನನಗೆ ಗೊತ್ತಿಲ್ಲ. ಘಟನೆ ನಡೆದ ನಂತರ ನನಗೆ ಮೃತ ಅಂಜಲಿ ನನ್ನ ಮಾವನ ಮನೆಯಲ್ಲಿ ಬಾಡಿಗೆಗೆ ಇದ್ದ ವಿಚಾರ ಗೊತ್ತಾಯಿತು. ನಾನು ಮೃತ ಅಂಜಲಿಯನ್ನು ಅಕೆ ಬಾಡಿಗೆ ಮನೆಯಲ್ಲಿ ಇದ್ದುದನ್ನು ನೋಡಿಲ್ಲ. ಮೃತ ಅಂಜಲಿ ಮನೆಯ ಒಳಗೆ ತೀರಿಕೊಂಡಿದ್ದಾರೆ ಎಂದು ನನ್ನ ಮಾವ ನನಗೆ ತಿಳಿಸಿದ್ದರು. ಆಕೆ ಯಾವ ರೀತಿ ತೀರಿಕೊಂಡಿದ್ದಾರೆ ಎಂದು ನನಗೆ ತಿಳಿಸಲಿಲ್ಲ. ಅಂಜಲಿ ನನ್ನ ಮಾವನ ಮನೆಯಲ್ಲಿ ಬಾಡಿಗಗೆ ಇದ್ದಾರೆ ಎಂದು ನನಗೆ ತಿಳಿದಿತ್ತು.   ವಿಸಿ ಮತ್ತು ನ್ಯಾಯಾಲಯದ ಮುಂದೆ ಹಾಜರಿರುವ ಅರೋಪಿಗಳನ್ನು ನಾನು ಈ ಹಿಂದೆ ನೋಡಿಲ್ಲ. ಪೊಟೋದಲ್ಲಿ ಕಂಡುಬರುವ ಕಾರನ್ನು ನಾನು ನೋಡಿಲ್ಲ. ಅರೋಪಿಗಳೆಲ್ಲರೂ ನಾನು ಬಾಡಿಗೆ ಕಟ್ಟಡದ ಮೇಲೆ ನಿಂತಿದ್ದಾಗ ಮಹಡಿ ಮೇಲೆ ಹೋಗಿದ್ದನ್ನು ನಾನು ನೋಡಿಲ್ಲ. ಚಾಸಾಃ 2 ನನಗೆ ಅಂಜಲಿಯ ಮನೆಯಲ್ಲಿ ನಡೆದ ಯಾವುದೇ ವಿಚಾರಗಳನ್ನು ತಿಳಿಸಿಲ್ಲ. ನಾನು ಅಂಜಲಿ ಮನೆಗೆ ಹೋಗಿ ಘಟನೆ ನೋಡಿಲ್ಲ. ನನ್ನ ಮಾವನವರು ಅಕೆಯ ಮನೆಗೆ ಹೋಗಿ ನೋಡಿದ್ದರು. ನಾನು ಅಂಜಲಿ ಮೃತದೇಹವನ್ನು, ಚೆಲ್ಲಾಪಿಲ್ಲಿಯಾಗಿದ್ದ ಬಟ್ಟೆಗಳನ್ನು, ತೆರೆದಿದ್ದ ಬೀರುವನ್ನು ಅಕೆಯ ಮನೆಯಲ್ಲಿ ಕಣ್ಣಾರೆ ನೋಡಿಲ್ಲ. ಪೊಲೀಸರಿಗೆ ನನ್ನ ಮಾವ ದೂರು ಕೊಟ್ಟ ವಿಚಾರ ನನಗೆ ತಿಳಿಯಿತು. ಅಂಜಲಿ ಕೊಲೆಯಾದ ದೃಶ್ಯವನ್ನು ನೋಡಿದ್ದೆ ಅಕೆಯ ಕೈಕಾಲುಗಳು ಮತ್ತು ದೇಹದ ಇತರೆ ಬಾಗ ಗಾಯವಾಗಿದ್ದು ಯಾರೋ ಕೊಲೆ ಮಾಡಿದ್ದಾರೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನನ್ನ ಮಾವ ನನಗೆ ವಿಚಾರ ತಿಳಿಸಿದ ದಿನ ಗಣೇಶ ಹಬ್ಬ ಇತ್ತು.

ಅಂಜಲಿ ಕೊಲೆಯಾದ ದಿನ ಮನೆಯ ಬಳಿ ಬಂದಿದ್ದ ಕಾರು, ಕಾರಿನಲ್ಲಿ ಬಂದಿದ್ದ ವ್ಯಕ್ತಿಗಳನ್ನು ನೋಡಿದ್ದೆ ಹಾಗೂ ನೋಡಿದರೆ ಗುರುತಿಸಬಲ್ಲೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನನ್ನ ಮಾವ ದೂರು ಕೊಟ್ಟ ನಂತರ ಪೊಲೀಸರು ಮನೆಯ ಬಳಿ ಬಂದಿದ್ದರು. ನಾನು ಪೊಲೀಸರು ಬಂದಾಗ ನೋಡಿದ್ದೇನೆ. ಅದರೆ ಪೊಲೀಸರು ಏನು ಮಾಡಿದರು ಎಂದು ನೋಡಿಲ್ಲ. ಪೊಲೀಸರು ನನ್ನನ್ನು ಅಂಜಲಿ ಮನೆಗೆ ಕರೆದಿದ್ದರು ನಾನು ಹೋಗಲಿಲ್ಲ. ನನ್ನ ಮಾವ ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದರು. ಪೊಲೀಸರು ಮೃತದೇಹ ವಶಕ್ಕೆ ಪಡೆಯಲು ಹೋಗುತ್ತಿದ್ದರು. ನಂತರ ಏನು ಮಾಡಿದರು ನಾನು ನೋಡಿಲ್ಲ. ನಾನು ಸ್ಥಳದಿಂದ ಹೊರಟು ಹೋಗಿದ್ದೆ.

3. ನಿಪಿ.2 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಾನು ಮತ್ತು ನನ್ನ ಮಾವ ಹಾಗೂ ರಮೇಶ ನನ್ನ ಮಾವನ ಮನೆಯ ಮುಂಬಾಗ ಸಹಿ ಮಾಡಿದ್ದೇವೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿರಲಿಲ್ಲ. ಶವದ ಮೈಮೇಲಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಒಂದು ಕಿಂಗ್ ಪಿಷರ್ ಬಿಯರ್ ಟಿನ್, ಒಂದು ಮುಕ್ಕಾಲು ಅಡಿ ಅಳತೆಯ ಕಬ್ಬಿಣದ ಇಕ್ಕಳ, ಒಂದು ಚಾಕು, ಹತ್ತಿಯಲ್ಲಿ ಮೆತ್ತಿದ್ದ ರಕ್ತ ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರಲಿಲ್ಲ. ಒಂದು ಸೀರೆ, ಒಂದು ನೈಟಿಯನ್ನು ನಾನು ಈ ಹಿಂದೆ ನೋಡಿಲ್ಲ. ಪೋಲೀಸರು ಶವ ಸಾಗಾಟ ಮಾಡಿದ್ದನ್ನು ನಾನು ನೋಡಿದೆ. ಸದರಿ ಮೃತ ದೇಹ ಅಂಜಲಿ ರವರದ್ದು ಎಂದು ನನಗೆ ತಿಳಿಯಿತು.

4. ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆಸಿರಲಿಲ್ಲ ಮತ್ತು ಯಾವುದೇ ವ್ಯಕ್ತಿಗಳನ್ನು ತೋರಿಸಿರಲಿಲ್ಲ. ಪೋಟೋದಲ್ಲಿ ಕಂಡುಬರುವ ಸ್ವಿಪ್ಟ್ ಡಿಸೈರ್ ಕಾರನ್ನು ನಾನು ಈ ಹಿಂದೆ ನೋಡಿಲ್ಲ. ಸದರಿ ಕಾರನ್ನು ಪೊಲೀಸರು ನನಗೆ ತೋರಿಸಿಲ್ಲ. ನನಗೆ ಪೊಲೀಸರು ಅರೋಪಿಗಳನ್ನು ತೋರಿಸಿದ್ದರು ಅವರ ಹೆಸರು ಮತ್ತು ವಿಳಾಸ ಸಹ ತಿಳಿಸಿದ್ದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರಲಿಲ್ಲ. ಮೃತರ ಮನೆಯಲ್ಲಿ 550 ರೂ ದರೋಡೆ ಅಗಿತ್ತು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಪೊಟೋದಲ್ಲಿ ಕಂಡುಬರುವ ಕಾರನ್ನು ನನಗೆ ಪೊಲೀಸರು ತೋರಿಸಿದ್ದರು ಎಂದು ನಾನು ಹೇಳಿಕೆ ಕೊಟ್ಟಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅಬಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಸರ್ಕಾರಿ ಅಬಿಯೋಜಕರಿಂದ**

5. ದಿನಾಂಕಃ 21-8-2020 ರಂದು ರಾತ್ರಿ 9-30 ಕ್ಕೆ ಮೃತ ಅಂಜಲಿ ಚಸಾಃ 2 ವರೊಂದಿಗೆ ಮಾತನಾಡುತ್ತಿದ್ದುದನ್ನು ನಾನು ನೋಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ರಾತ್ರಿ 11-30 ಗಂಟೆ ಸಮಯದಲ್ಲಿ 4-5 ಜನ ಹುಡುಗರು ಸ್ವಿಪ್ಟ್ ಡಿಸೈರ್ ಕಾರಿನಲ್ಲಿ ಬಂದು ಕಾರನ್ನು ನಿಲ್ಲಿಸಿ ಕೆಳಗೆ ಇಳಿದಿದ್ದನ್ನು ನಾನು ಕಣ್ಣಾರೆ ನೋಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಕಾರನ್ನು ನೋಡಿದ್ದೆ ಅದು ಸ್ವಿಪ್ಟ ಡಿಸೈರ ಕಾರು ಅಗಿದ್ದು ಅದರ ಮುಂಬಾಗ ಸೀಬಿ ನರಸಿಂಹಸ್ವಾಮಿ ಎಂದು ಸ್ಟಿಕರ್ ಹಾಕಿತ್ತು ಎಂದು ಪೊಲೀಸರ ಮುಂದೆ ಹೇಳಿದ್ದೆ ಎಂದರೆ ಸರಿಯಲ್ಲ. 5 ಜನರು ಮರದಡಿ ನಿಂತು

ಮಾತನಾಡುತ್ತಿದ್ದು ನಂತರ ಮೂವರು ಮಹಡಿ ಮೇಲೆ ಹೋಗಿದ್ದು ಉಳಿದ ಇಬ್ಬರು ಕೆಳಗೆ ಮಾತನಾಡುತ್ತಾ ನಿಂತಿದ್ದಾಗ ಅವರೆಲ್ಲರೂ ಅಂಜಲಿ ಕಡೆಯವರು ಅಥವಾ ಮಹಾರಾಷ್ಟದ ಕಡೆ ಹುಡಗರ ಸ್ನೇಹಿತರೋ ಎಂದು ತಿಳಿದಿದ್ದೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕಃ 23-8-2020 ರಂದು ಸಂಜೆ ನನ್ನ ಮಾವ ನನಗೆ ಅಂಜಲಿಯನ್ನು ಮನೆಯಲ್ಲಿ ಯಾರೋ ಕೊಲೆ ಮಾಡಿದ್ದಾರೆ ಎಂದು ದಯಾನಂದ ತಿಳಿಸಿದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಾವ ಮೃತ ಅಂಜಲಿ ಮನೆ ಬಳಿ ಹೋಗಿ ಬೆಡ್ ರೂಮಿನ ಕಿಟಕಿ ಮೂಲಕ ನೋಡಿದಾಗ ಬೀರುವಿನ ಬಾಗಿಲು ತೆಗೆದಿದ್ದು ಅದರಲ್ಲಿನ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡುಬಂತು. ಮನೆಯಬಾಗಿಲು ತಳ್ಳಿದಾಗ ಮೃತ ಅಂಜಲಿಯ ದೇಹ ಓಣಿಯಲ್ಲಿ ಅಂಗಾತವಾಗಿ ಬಿದ್ದು ಮಖ ಮತ್ತು ಕೈಗಳು ಕೊಳೆತಿದ್ದು ನೀಚರಕ್ತ ಹೊರಬರುತ್ತಿತ್ತು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆಕೆಯ ಕೈಕಾಲುಗಳನ್ನು ಕಟ್ಟಿ ಅವಳ ಮೈಮೇಲಿದ್ದ ಬಟ್ಟೆಗಳು ಮೊಣಕಾಲಿನ ವರೆಗೆ ಎತ್ತಿದ್ದು ಯಾರೋ ಅಕೆಯನ್ನು ಯಾವುದೋ ಉದ್ದೇಶಕ್ಕೆ ಕೊಲೆ ಮಾಡಿರಬಹುದು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕಃ 22-8-2020 ರಂದು ರಾತ್ರಿ 11-30 ಕ್ಕೆ ಸ್ವಿಫ್ಟ್ ಡಿಸೈರ್ ಕಾರಿನಲ್ಲ ಬಂದಿದ್ದ ಅಸಾಮಿಗಳೇ ಅಕೆಯನ್ನು ಕೊಲೆ ಮಾಡಿರಬಹುದು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಬಾಗವನ್ನು ನಿಪಿ.15 ಎಂದು ಗುರುತಿಸಲಾಯಿತು.

6. ಮುಮಾ.1 ರಿಂದ 5 ನ್ನು ಪೊಲೀಸರು ನನ್ನ ಸಮಕ್ಷಮ ದಿನಾಂಕಃ 23-8-2020 ರಂದು ಅಮಾತನ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನಾನು ಅಮನತ್ತುಪಡಿಸುವ ವೇಳೆ ನೋಡಿದ್ದೆ ಎಂದರೆ ಸರಿಯಲ್ಲ. ಅವುಗಳನ್ನು ನಾನು ಸ್ಥಳದಲ್ಲಿ ನೋಡಿದ್ದರೂ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿನಾಂಕಃ 30-8-2020 ರಂದು  ನನ್ನನ್ನು ತುಮಕೂರು ನಗರ ಠಾಣೆಯ ವೃತ್ತ ನಿರೀಕ್ಷಕರ ಕಚೇರಿಗೆ ಕರೆಸಿದ್ದು  ವಿಸಿ ಮೂಲಕ ಹಾಜರುಪಡಿಸಿರುವ ಮೂವರು ಅರೋಪಿಗಳು ಹಾಗೂ ನ್ಯಾಯಾಲಯದ ಮುಂದೆ ಹಾಜರಿರುವ ಇಬ್ಬರು ಅರೋಪಿಗಳನ್ನು ನನಗೆ ತೋರಿಸಿ ಅವರ ಹೆಸರು ಮತ್ತು ವಿಳಾಸ ತಿಳಿಸಿ ಇವರೇ ಅಂಜಲಿರವರನ್ನು ಕೊಲೆ ಮಾಡಿದ ವ್ಯಕ್ತಿಗಳು ಎಂದು ನನಗೆ ತೋರಿಸಿ ಹೇಳಿದ್ದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಎಲ್ಲಾ ಅರೋಪಿಗಳು ಮೃತ ಅಂಜಲಿಯನ್ನು ಕೊಲೆ ಮಾಡಿ ಅಕೆಯ ಮನೆಯಲ್ಲಿದ್ದ 550 ರೂಪಾಯಿಗಳನ್ನು ಮತ್ತು ಒಂದು ಮೊಬೈಲನ್ನು ದೋಚಿಕೊಂಡು ಹೋಗಿದ್ದಾರೆ ಎಂದು ನನಗೆ ವೃತ್ತ ನಿರೀಕ್ಷಕರು ತಿಳಿಸಿದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಅರೋಪಿಗಳು ಅಂಜಲಿ ಮನೆಯ ಬಳಿ ಬಂದಿದ್ದ ಸ್ವಿಫ್ಟ್ ಡಿಸೈರ್ ಕಾರು ಸಂಖ್ಯೆ ಕೆಎ-43 6083 ವಾಹನವನ್ನು ನನಗೆ ತೋರಿಸಿದರು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಪೋಟೋದಲ್ಲಿ ಕಂಡುಬರುವ ಕಾರನ್ನೇ ನನಗೆ ಪೊಲೀಸರು ಠಾಣೆಯ ಬಳಿ ತೋರಿಸಿದ್ದು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ  ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಹಾಗೂ ವಿಸಿ ಮೂಲಕ ಹಾಜರುಪಡಿಸಿರುವ ಅರೋಪಿಗಳನ್ನು ವೃತ್ತ

ನಿರೀಕ್ಷಕರ ಕಚೇರಿಯಲ್ಲಿ ನೋಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಹ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಬಾಗವನ್ನು ನಿಪಿ.16 ಎಂದು ಗುರುತಿಸಲಾಯಿತು. ನಾನು ಅಂಜಲಿ ಮನೆಯ ಒಳಬಾಗದ ಕೊಲೆಯಾದ ದೃಶ್ಯವನ್ನು ನೋಡಿದ್ದೆ ವೃತ್ತ ನಿರೀಕ್ಷಕರ ಕಚೇರಿಯಲ್ಲಿ 5 ಜನ ಅರೋಪಿಗಳನ್ನು ನೋಡಿದ್ದೆ ಎಂದರೆ ಸರಿಯಲ್ಲ. ಅರೋಪಿಗಳು ಬಂದಿದ್ದ ಕಾರನ್ನೂ ಸಹ ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನಿಪಿ.15 ಮತ್ತು 16 ರಂತೆ ಹೇಳಿಕೆ ಸಹ ನೀಡಿದ್ದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಅರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1** ಮತ್ತು **4** ನೇ ಅರೋಪಿಗಳ ಪರಃ ಶ್ರೀ.ಬಿ.ಕೆ.ಪಿ.ಎಸ್, ಶ್ರೀ.ಎಂ.ಸಿ.ಸಿ 3 ನೇ ಅರೋಪಿ ಪರ, ಶ್ರೀ.ಎನ್.ಎಂ ರವರು 2 ನೇ ಅರೋಪಿ ಪರ, ಶ್ರೀ.ಟಿ.ಓ.ಹೆಚ್ 5 ನೇ ಅರೋಪಿ ಪರ ವಕೀಲರಿಂದ

ನಿಪಿ.2 ರಲ್ಲಿ ಏನು ಬರವಣಿಗೆ ಮಾಡಿದೆ ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ನಿಪಿ.2 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.